ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಕಳೆದ 5 ವರ್ಷಗಳಲ್ಲಿ ಆಳಂದ ಪುರಸಭೆ ವ್ಯಾಪ್ತಿಯ ಆಸ್ತಿಗೆ ಸಂಬಂಧಿಸಿದಂತೆ 2625 ದಸ್ತಾವೇಜುಗಳು ನೋಂದಣಿ ಆಗಿರುತ್ತದೆ.

ಆ) ಗಮನಕ್ಕೆ ಬಂದಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಎಸ್‌ಹೆಚ್‌ಡಿಪಿ ಯೋಜನೆ ಅಡಿ ಲೋಕೋಪಯೋಗಿ ರಸ್ತೆ

5412 (5425); ಶ್ರೀ ಪಾಟೀಲ್ ಬಿ. ಆರ್. (ಆಳಂದ)

ಅ) ಆಳಂದ ನಗರದ ಸಿದ್ಧಾರ್ಥ ಚೌಕದಿಂದ ಪ್ರವಾಸಿ ಮಂದಿರದವರೆಗಿನ ಲೋಕೋಪಯೋಗಿ ರಸ್ತೆ ಎಸ್‌ಹೆಚ್‌ಡಿಪಿ ಯೋಜನೆ ಅಡಿಯಲ್ಲಿ ಕಾಮಗಾರಿ ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸದರಿ ರಸ್ತೆ ಕಾಮಗಾರಿಯನ್ನು ನಗರೋತ್ಥಾನ ಯೋಜನೆ ಅಡಿಯಲ್ಲಿ ತೆಗೆದುಕೊಂಡಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಯಾವ ಹಂತದಲ್ಲಿದೆ?

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ನಗರೋತ್ಥಾನ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾದ ರಸ್ತೆಯ ಭಾಗವನ್ನು ಹೊರತುಪಡಿಸಿ ಉಳಿದ ಭಾಗವನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆಯು ಎಸ್‌ಹೆಚ್‌ಡಿಪಿ ಹಂತ–3 ರಲ್ಲಿ ಪರಿಶೀಲನೆಯಲ್ಲಿದೆ.

ಆ) ನಿಜ. ಆಳಂದ ಪಟ್ಟಣದ ಸಿದ್ಧಾರ್ಥ ಚೌಕದಿಂದ ಪ್ರವಾಸಿ ಮಂದಿರದವರೆಗಿನ ರಸ್ತೆಯ ಪೈಕಿ ಈ ಕೆಳಕಂಡ ಭಾಗಗಳ ರಸ್ತೆಯ ಕಾಮಗಾರಿಯನ್ನು ನಗರೋತ್ಥಾನ ಯೋಜನೆ ಅಡಿಯಲ್ಲಿ ತೆಗೆದುಕೊಂಡಿದ್ದು ಕಾಮಗಾರಿ ವಿವರ ಈ ಕೆಳಗಿನಂತಿದೆ;

1. ಆಳಂದ ಪಟ್ಟಣದ ಮುಖ್ಯ ರಸ್ತೆ ರಜವಿ ರೋಡ್ ಶಭಿನಾ ಲಾಡ್ಜದಿಂದ ಬಸ್‌ಸ್ಟ್ಯಾಂಡ್ ವರೆಗೆ ಎರಡು ಬದಿ ರಸ್ತೆ ಅಗಲೀಕರಣ ಮಾಡಿದ ಸ್ಥಳದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ.

2. ಆಳಂದ ಪಟ್ಟಣದ ಬಸ್‌ಸ್ಟ್ಯಾಂಡ್‌ದಿಂದ ದರ್ಗಾ ಬೇಸವರೆಗೆ ಎರಡು ಬದಿ ರಸ್ತೆ ಅಗಲೀಕರಣ ಮಾಡಿದ ಸ್ಥಳದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ.

ಇ) ಸದರಿ ಕಾಮಗಾರಿಗಳಿಗೆ ಈಗಾಗಲೇ ಟೆಂಡರ್ ಕಾರ್ಯಾದೇಶ ನೀಡಲಾಗಿದ್ದು, ಕೆಲಸ ಪ್ರಾರಂಭಿಸುವ ಹಂತದಲ್ಲಿದೆ.

ಅನುದಾನ ಹಂಚಿಕೆ

5413 (5429); ಶ್ರೀ ಪಾಟೀಲ ಜೆ. ಟಿ. (ಬೀಳಗಿ)

ಅ) 2013–14, 2014–15, ಹಾಗೂ 2015–16 ಅವಧಿಯಲ್ಲಿ ವಕ್ಫ್ ಬೋರ್ಡಿಗೆ ಹಂಚಿಕೆಯಾದ ಅನುದಾನವೆಷ್ಟು? (ವಿವರ ನೀಡುವುದು);

ಆ) ಯಾವ ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಅನುದಾನವನ್ನು ಮಂಜೂರು ಮಾಡಲಾಗಿದೆ ಕ್ಷೇತ್ರವಾರು ವಿವರಣೆ ನೀಡುವುದು?

ಡಾ: ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) 2013–14, 2014–15 ಹಾಗೂ 2015–16ರ ಅವಧಿಯಲ್ಲಿ ವಕ್ಫ್ ಬೋರ್ಡಿಗೆ ಹಂಚಿಕೆಯಾದ ಅನುದಾನದ ವಿವರವನ್ನು "ಅನುಬಂಧ–1" ರಲ್ಲಿ ಲಗತ್ತಿಸಿದೆ.

ಆ) ಕಳೆದ 3 ವರ್ಷಗಳಲ್ಲಿ ವಕ್ಫ್ ಮಂಡಳಿಯಿಂದ ಬಿಡುಗಡೆ ಮಾಡಿದ ಅನುದಾನದ ವಿವರವನ್ನು "ಅನುಬಂಧ–1" ಮತ್ತು "ಅನುಬಂಧ–2" ರಲ್ಲಿ ನಮೂದಿಸಿ ಲಗತ್ತಿಸಲಾಗಿದೆ.